# DPUE

# KANNADA

# NOTES

DPUE

# 2. ವಾಲ್‌ಪರೈ: ಅಭಿವೃದ್ಧಿತಂದದುರಂತ

- ಕೃಪಾಕರ, ಸೇನಾನಿ, ಕೆ.ಪುಟ್ಟಸ್ವಾಮಿ

ಲೇಖಕರ ಪರಿಚಯ:

ಕೃಪಾಕರ ಮತ್ತು ಸೇನಾನಿ ಇಬ್ಬರೂ ವನ್ಯ ಜೀವಿ ಛಾಯಾಗ್ರಹಣದಲ್ಲಿ ಖ್ಯಾತನಾಮರು. ಏಷ್ಯಾದಲ್ಲೇ ಮೊತ್ತ ಮೊದಲ ಬಾರಿಗೆ ಕಾಡಿನಲ್ಲಿರುವ ಸೀಳುನಾಯಿಗಳ ಕುರಿತ ಸಾಕ್ಷ್ಯಚಿತ್ರಕ್ಕಾಗಿ ಪ್ರತಿಷ್ಠಿತ ಗ್ರೀನ್ ಆಸ್ಕರ್ ಪುರಸ್ಕಾರಕ್ಕೆ ಪಾತ್ರರಾದವರು. ಇವರಿಬ್ಬರೂ ಕೆ. ಪುಟ್ಟಸ್ವಾಮಿಯವರೊಂದಿಗೆ ಸೇರಿ ರಚಿಸಿರುವ 'ಜೀವಜಾಲ ಎಂಬ ಕೃತಿ ಅತ್ಯಂತ ಪ್ರಸಿದ್ಧವಾಗಿದೆ.
ಮಾನವ ಕೇಂದ್ರಿತ ಅಭಿವೃದ್ಧಿಯು ಪ್ರಕೃತಿಗೆ ನಾಶವನ್ನು ತಂದುಕೊಡುವ ಚಿತ್ರಣ ಇಲ್ಲಿದೆ. ಸ್ವಾರ್ಥಕ್ಕೊಳಗಾದ ಮಾನವನು ತನ್ನ ಸುಖಕ್ಕಾಗಿ ಕಾಡು, ಪ್ರಾಣಿ ಪಕ್ಷಿ ಸಂಕುಲಗಳ ನಾಶಕ್ಕೆ ಹೇಗೆ ಕಾರಣನಾಗುತ್ತಾನೆ ಎನ್ನುವ ವಿಚಾರಗಳು ಈ ಲೇಖನದಲ್ಲಿ ಮೂಡಿಬಂದಿವೆ.

ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

1. ಈ ಪ್ರದೇಶಕ್ಕೆ ಆಗ ಹೆಸರೇ ಇರಲಿಲ್ಲ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೃಪಾಕರ, ಸೇನಾನಿ, ಕೆ.ಪುಟ್ಟಸ್ವಾಮಿಯವರು ಬರೆದ 'ವಾಲ್‌ಪರೈ: ಅಭಿವೃದ್ಧಿ ತಂದ ದುರಂತ' ಎಂಬ ಗದ್ಯಭಾಗದಿಂದಆರಿಸಲಾಗಿದೆ.
ಸಂದರ್ಭ: ವಾಲ್‌ಪರೈ ಎಂಬ ಕಾಡಿನ ಪರಿಚಯವನ್ನು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.
ವಿವರಣೆ: ಕೊಯಮತ್ತೂರಿನಿಂದ ದಕ್ಷಿಣಕ್ಕೆ ನೂರು ಕಿಲೋ ಮೀಟರ್ ದೂರದಲ್ಲಿರುವ ವಾಲ್‌ಪರೈ ಎಂಬ ದಟ್ಟವಾದ ಕಾಡು ಬ್ರಿಟಿಷರು ಆಗಮಿಸುವ ಮೊದಲು ಅಜ್ಞಾತವಲಯವಾಗಿತ್ತು. ಗಗನಚುಂಬಿ ಮರಗಳ ಮೇಲ್ಹಾವಣಿಯನ್ನು ಭೇದಿಸಿ ಭೂಸ್ಪರ್ಶ ಮಾಡಲು ಸೂರ್ಯಕಿರಣಗಳು ಸೆಣಸುತ್ತಿದ್ದ ದಟ್ಟವಾದ ಕಾಡಾಗಿತ್ತು. ಆ ಕಾಡು ಜನರಿಗೆ ಪರಿಚಯವಿಲ್ಲದ ಪ್ರದೇಶವಾಗಿತ್ತು. ಆದರೆ ಬ್ರಿಟಿಷರು ಬಂದ ನಂತರ ಆ ಕಾಡು ಹೊರಲೋಕಕ್ಕೆ ಪರಿಚಯವಾಗುವುದರೊಂದಿಗೆ ನಾಶವಾಗತೊಡಗಿತು.
ಸ್ವಾರಸ್ಯ: ವಾಲ್‌ಪರೈಯಲ್ಲಿದ್ದ ಅರಣ್ಯವು ಯಾರಿಗೂ ಪರಿಚಯವಿಲ್ಲದ ದಟ್ಟವಾದ ಅರಣ್ಯವಾಗಿತ್ತು ಎಂದು ಇಲ್ಲಿ ವ್ಯಕ್ತವಾಗುತ್ತದೆ.

2. ಅದು ಅವರು ಆವರೆಗೂ ನೋಡಿರದ ಪ್ರಾಣಿ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೃಪಾಕರ, ಸೇನಾನಿ, ಕೆ.ಪುಟ್ಟಸ್ವಾಮಿಯವರು ಬರೆದ 'ವಾಲ್‌ಪರೈ:ಅಭಿವೃದ್ಧಿ ತಂದ ದುರಂತ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.
ಸಂದರ್ಭ: ವಾಲ್‌ಪರೈಯಲ್ಲಿದ್ದ ಕಾಡಿಗೆ ಕುದುರೆಯೇರಿ ಬಂದ ಕಾರ್ವೆರ್ ಮಾರ್ಷ್‌ನನ್ನು ಕಂಡು ಆದಿವಾಸಿಗಳು ಭಯಭೀತರಾಗಿ ಓಡಿದ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.
ವಿವರಣೆ: ಕಾರ್ವೆರ್ ಮಾರ್ಷ್ ಎಂಬ ಬ್ರಿಟಿಷ್ ವ್ಯಕ್ತಿಯು ಆ ತನಕ ಅಪರಿಚಿತವಾಗಿದ್ದ ವಾಲ್‌ಪರೈ ಎಂಬ ದಟ್ಟಅರಣ್ಯಕ್ಕೆ ಕುದುರೆಯೇರಿ ಬರುತ್ತಾನೆ. ಆಗ ಆದಿವಾಸಿಗಳು ಭಯಗೊಂಡು ಓಡಿಹೋಗುತ್ತಾರೆ. ಟೋಪಿ ಪೋಷಾಕುಗಳನ್ನು ಧರಿಸಿದ ವ್ಯಕ್ತಿಯನ್ನು ಅವರು ಅದುವರೆಗೆ ನೋಡಿರಲಿಲ್ಲ. ಕುದುರೆ ಎಂಬ ಪ್ರಾಣಿಯನ್ನು ಕೂಡಾ ಅವರು ನೋಡಿರಲಿಲ್ಲ. ಕುದುರೆಯು ಕಾಡಿನ ಜನರಿಗೆ ಅಪರಿಚಿತವಾಗಿತ್ತು.
ಸ್ವಾರಸ್ಯ: ಆದಿವಾಸಿಗಳಿಗೆ ಕಾಡು, ಕಾಡಿನ ಪ್ರಾಣಿಗಳ ಪರಿಚಯವಿತ್ತೇ ಹೊರತು ನಗರ ಜೀವನದ ಪರಿಚಯವಿರಲಿಲ್ಲ ಎಂಬ ವಿಚಾರ ಇಲ್ಲಿ ವ್ಯಕ್ತವಾಗುತ್ತದೆ.

3. ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದವು.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೃಪಾಕರ, ಸೇನಾನಿ, ಕೆ.ಪುಟ್ಟಸ್ವಾಮಿಯವರು ಬರೆದ 'ವಾಲ್‌ಪರೈ: ಅಭಿವೃದ್ಧಿ ತಂದ ದುರಂತ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ವಾಲ್‌ಪರೈ ಎಂಬಲ್ಲಿದ್ದ ದಟ್ಟ ಅರಣ್ಯವು ನಾಶವಾಗಿ ಚಹಾ ತೋಟವಾದ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

ವಿವರಣೆ: ವಾಲ್‌ಪರೈ ಎಂಬಲ್ಲಿದ್ದ ದಟ್ಟ ಅರಣ್ಯಕ್ಕೆ ಬಂದಕಾರ್ವೆರ್ ಮಾರ್ಷ್ ಎಂಬ ಬ್ರಿಟಿಷಿಗ ಆದಿವಾಸಿಯಾದ ಪೂಣಚ್ಚಿಯನ್ನು ಪರಿಚಯ ಮಾಡಿಕೊಂಡುಅಲ್ಲೇ ನೆಲೆಯೂರುತ್ತಾನೆ. ಅವನ ನೆರವಿನಿಂದ ಸ್ಥಳೀಯರ ವಿಶ್ವಾಸ ಸಂಪಾದಿಸಿ, ಆ ಕಾಡಿನಲ್ಲಿ ಚಹಾ ಗಿಡಗಳನ್ನು ನೆಡುತ್ತಾನೆ. ಮುಂದೆ ಅಲ್ಲಿನ ಅರಣ್ಯ ನಾಶವಾದುದನ್ನು ಲೇಖಕರು ಮೇಲಿನ ಮಾತಿನ ಮೂಲಕ ಸಮರ್ಥಿಸುತ್ತಾರೆ.

ಸ್ವಾರಸ್ಯ: ನಾಗರಿಕತೆಯ ಸಂಕೇತವಾದ ಚಹಾ ಎನ್ನುವುದು ಒಂದು ಅರಣ್ಯವನ್ನು ಹೇಗೆ ನಾಶಪಡಿಸಿತೆನ್ನುವುದು ಇಲ್ಲಿ ವ್ಯಕ್ತವಾಗುತ್ತದೆ.

4. ಕಾರ್ಮಿಕರು ಕೆಂಪು ಬಾವುಟ ಹಿಡಿದು ಹೋರಾಟಕ್ಕೆ ಸಜ್ಜಾಗಿದ್ದಾರೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೃಪಾಕರ, ಸೇನಾನಿ, ಕೆ.ಪುಟ್ಟಸ್ವಾಮಿಯವರು ಬರೆದ 'ವಾಲ್‌ಪರೈ: ಅಭಿವೃದ್ಧಿ ತಂದ ದುರಂತ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ವಾಲ್‌ಪರೈನಲ್ಲಿ ಉದ್ಯೋಗ ಕಳೆದುಕೊಂಡ ಕಾರ್ಮಿಕರ ಸ್ಥಿತಿಯ ಬಗ್ಗೆ ಲೇಖಕರು ಈ ಮೇಲಿನ ಮಾತಿನ ಮೂಲಕ ಹೇಳುತ್ತಾರೆ.

ವಿವರಣೆ: ವಾಲ್‌ಪರೈಯನ್ನು ಪ್ರವೇಶಿಸಿದ ಕಾರ್ವೆರ್ ಮಾರ್ಷ್ ಚಹಾ ಗಿಡಗಳನ್ನು ನೆಡುವುದರ ಮೂಲಕ ಅರಣ್ಯದ ನಾಶಕ್ಕೆ ಮುಂದಾಗುತ್ತಾನೆ. ಮಾರ್ಷ್‌ನ ಚಹಾ ತೋಟದ ಯಶಸ್ಸು ಅಗ್ರಗಣ್ಯ ಕೈಗಾರಿಕೋದ್ಯಮಿಗಳನ್ನು ಕೈ ಬೀಸಿ ಕರೆಯಿತು. ವಾಣಿಜ್ಯ ವ್ಯವಹಾರದ ದೃಷ್ಟಿಯಿಂದ ಅತಿ ಶ್ರೀಮಂತ ಪ್ರದೇಶವೆಂದು ಗುರುತಿಸಿಕೊಂಡಿದ್ದ ವಾಲ್‌ಪರೈ ಮುಂದಿನ ದಿನಗಳಲ್ಲಿ ತತ್ತರಿಸತೊಡಗಿತ್ತು. ವಿಶ್ವಮಾರುಕಟ್ಟೆಯಲ್ಲಿ ಚಹಾದ ಬೇಡಿಕೆ ಕುಸಿದು ರಫ್ತು ಇಳಿಮುಖಗೊಂಡು ಚಹಾ ತೋಟಗಳು ನಷ್ಟವನ್ನನುಭವಿಸಿದವು. ತೋಟದ ಮಾಲಿಕರು ಉತ್ಪಾದನಾ ವೆಚ್ಚ ಕಡಿಮೆಗೊಳಿಸುವುದಕ್ಕಾಗಿ ಜನರು ನಿರ್ವಹಿಸುತ್ತಿದ್ದ ಕೆಲಸಗಳ ಬದಲು ಯಂತ್ರಗಳನ್ನು ಅವಲಂಬಿಸಿದರು. ಉದ್ಯೋಗಗಳನ್ನು ಕಳಕೊಂಡ ಕಾರ್ಮಿಕರು ಕೆಂಪು ಬಾವುಟ ಹಿಡಿದು ಹೋರಾಟಕ್ಕೆ ಸಜ್ಜಾದರು.

ಸ್ವಾರಸ್ಯ: ಯಂತ್ರಗಳಿಂದಾಗಿ ಉದ್ಯೋಗವನ್ನು ಕಳೆದುಕೊಂಡ ಕಾರ್ಮಿಕರ ಸ್ಥಿತಿ ಇಲ್ಲಿಕಾಣಿಸುತ್ತದೆ.

5. ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ!

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೃಪಾಕರ, ಸೇನಾನಿ, ಕೆ.ಪುಟ್ಟಸ್ವಾಮಿಯವರು ಬರೆದ 'ವಾಲ್‌ಪರೈ: ಅಭಿವೃದ್ಧಿ ತಂದ ದುರಂತ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ:ವಾಲ್‌ಪರೈನಲ್ಲಿದ್ದ ದಟ್ಟ ಅರಣ್ಯವು ನಾಶವಾಗಿ ಅಲ್ಲಿದ್ದ ಹಕ್ಕಿಗಳು ನೆಲೆ ಕಳೆದುಕೊಂಡ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

ವಿವರಣೆ: ಕೈಗಾರಿಕೋದ್ಯಮಿಗಳಿಂದಾಗಿ ವಾಲ್‌ಪರೈ ಎಂಬ ದಟ್ಟ ಅರಣ್ಯವು ನಾಶ ಹೊಂದಿದ್ದದಲ್ಲದೆ, ಅಲ್ಲಿ ವಾಸವಾಗಿದ್ದ ಪ್ರಾಣಿ-ಪಕ್ಷಿ ಸಂಕುಲಗಳು ನಾಶವಾಗುತ್ತವೆ. ಮಿನುಗುವ ಹಸಿರು ಪಾಚಿಗಳನ್ನು ಹೊದ್ದು ಮಲಗಿದ ಕಲ್ಲುಬಂಡೆಗಳ ನಡುವೆ, ನುಸುಳಿ ಹರಿಯುತ್ತಿದ್ದ ಸ್ವಚ್ಛನೀರಿನ ಹಳ್ಳಕೊಳ್ಳಗಳನ್ನು ಆಶ್ರಯ ತಾಣವಾಗಿಸಿಕೊಂಡ ವಿಷ್‌ಲಿಂಗ್‌ಥ್ರಷ್ ಹಕ್ಕಿಗಳಿಗೆ ನೆಲೆ ಇಲ್ಲವಾಯಿತು. ಬದಲಾದ ಪರಿಸ್ಥಿತಿಯಲ್ಲಿ ಆ ಹಕ್ಕಿಗಳಿಗೆ ಕೊಳಚೆ ನೀರಿನ ಚರಂಡಿಗಳೆ ಆಶ್ರಯತಾಣಗಳಾದವು. ಹೀಗಿದ್ದರೂ ಅವು ಹಾಡುವುದನ್ನು ಬಿಟ್ಟಿಲ್ಲ ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ: ಮಾನವಕೇಂದ್ರಿತ ಅಭಿವೃದ್ಧಿಯಿಂದಾಗಿ ಪಕ್ಷಿಗಳಿಗೆ ತೊಂದರೆ ಉಂಟಾದರೂ ಅವುಗಳು ತಮ್ಮ ಜನ್ಮ ಸ್ವಭಾವವಾದ ಹಾಡುವುದನ್ನು ಬಿಟ್ಟಿಲ್ಲ ಎಂಬ ಆಶಯ ಇಲ್ಲಿ ವ್ಯಕ್ತವಾಗುತ್ತದೆ.

DRAFT

ಒಂದು ವಾಕ್ಯದಲ್ಲಿ ಉತ್ತರಿಸಿ.

1. ಬ್ರಿಟಿಷರಲ್ಲಿ ಹಾಯ್ದು ಬಂದಿರುವ ಆನುಷಂಗಿಕ ಗುಣ ಯಾವುದು?

ಹೊಸತನ್ನು ಶೋಧಿಸುವುದು, ಅನ್ವೇಷಿಸುವುದು - ಬ್ರಿಟಿಷರಲ್ಲಿ ಹಾಯ್ದು ಬಂದಿರುವ ಆನುಷಂಗಿಕ ಗುಣವಾಗಿದೆ.

2. ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ ಯಾರು?

ಕಾರ್ವರ್ ಮಾರ್ಷ್ ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ.

3. ಮಾರ್ಷ್ ವಾಲ್‌ಪರೈಗೆ ಬಂದುದು ಯಾವಾಗ?

1890 ರಲ್ಲಿ ಮಾರ್ಷ್ ವಾಲ್‌ಪರೈಗೆ ಬಂದನು.

4. ಮಾರ್ಷ್‌ನ ಜತೆಗಾರನ ಹೆಸರೇನು?

ಮಾರ್ಷ್‌ನ ಜತೆಗಾರನ ಹೆಸರು ಪೂಣಚ್ಚಿ.

5. ಕೆಂಪುಪಟ್ಟಿಗೆ ಸೇರಿದ ಪ್ರಾಣಿ ಯಾವುದು?

ಸಿಂಹ ಬಾಲದ ಕೋತಿ ಕೆಂಪುಪಟ್ಟಿಗೆ ಸೇರಿದ ಪ್ರಾಣಿಯಾಗಿದೆ.

6. ವಾಲ್‌ಪರೈನ ದುರಂತದ ಮೂಲ ಬೀಜಗಳು ಯಾವ ರೂಪದಲ್ಲಿ ಬಂದವು?

ವಾಲ್‌ಪರೈನ ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದವು.

ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು?

ಬ್ರಿಟಿಷರು ಬರುವುದಕ್ಕೆ ಮೊದಲು ವಾಲ್‌ಪರೈ, ಗಗನಚುಂಬಿ ಮರಗಳ ಮೇಲ್ಹಾವಣಿಯನ್ನು ಭೇದಿಸಿ ಭೂಸ್ಪರ್ಷ ಮಾಡಲು ಸೂರ್ಯಕಿರಣಗಳು ಸೆಣಸುತ್ತಿದ್ದ ದಟ್ಟವಾದ ಕಾಡಾಗಿತ್ತು. ಮಾತ್ರವಲ್ಲದೆ ಶೋಲಾ ಕಾಡುಗಳಿಂದ, ಹಳ್ಳಕೊಳ್ಳಗಳಿಂದ ತುಂಬಿತ್ತು.

2.ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

ಮಾರ್ಷ್‌ನ ಕುದುರೆಯ ಖುರಪುಟದ ಸದ್ದಿಗೆ ಆದಿವಾಸಿಗಳು ದಿಗಿಲುಗೊಂಡರು. ಅವರು ಅದುವರೆಗೂ ಕುದುರೆಯನ್ನು ನೋಡಿರಲಿಲ್ಲ. ಅದರ ಜೊತೆಯಲ್ಲಿ ಟೋಪಿ ಧರಿಸಿದ ನಾಜೂಕು ಪೋಷಾಕಿನ ಮಾರ್ಷ್. ಈ ಎರಡು ವಿಚಿತ್ರಗಳನ್ನು ಒಮ್ಮೆಲೆ ಕಂಡ ಅವರು ಭಯದಿಂದ ಮಕ್ಕಳನ್ನು ಎಳೆದುಕೊಂಡು ದಟ್ಟಡವಿಯಲ್ಲಿ ಮಿಂಚಿನಂತೆ ಮಾಯವಾದರು.

3. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?

ಕೈಗಾರಿಕೋದ್ಯಮಿಗಳಿಂದಾಗಿ ಗಗನಚುಂಬಿ ಮರಗಳು ನೆಲಕ್ಕುರುಳಿದವು. ಫಲವತ್ತಾದ ಭೂಮಿಯಲ್ಲಿ ರಸ್ತೆ ನಿರ್ಮಾಣವಾಯಿತು. ಹೊಗೆಯುಗುಳುವ, ಗಡಗಡ ಸದ್ದು ಮಾಡುವ ಲಾರಿ, ಟ್ರ್ಯಾಕ್ಟರುಗಳು ಬಂದವು. ಅರಣ್ಯದ ನೀರವತೆ ನಾಶವಾಯಿತು. ಹೀಗೆ ಹಚ್ಚ ಹಸುರಿನ ಕಾಡು, ಶುದ್ಧವಾದ ಗಾಳಿ, ಸ್ವಚ್ಛಂಧವಾಗಿ ಬದುಕುತ್ತಿದ್ದ ಅಪರೂಪದ ಪ್ರಾಣಿ, ಪಕ್ಷಿಗಳು ನಾಶವಾದುವು.

4. ಸಿಂಹ ಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?

ವೃಕ್ಷವಾಸಿಗಳಾದ ಕೋತಿಗಳು ಮರದಿಂದ ಮರಕ್ಕೆ ಹಾರುವಂತಿಲ್ಲ. ಬದಲು ನೆಲಕ್ಕೆ ಇಳಿದು ಡಾಂಬರ್ ರಸ್ತೆ ದಾಟಿ ಮತ್ತೊಂದು ಮರ ಹತ್ತಬೇಕು. ರಸ್ತೆದಾಟುವ ನಾಗರಿಕ ಬುದ್ಧಿ ಇಲ್ಲದ ಕೋತಿಗಳು ವಾಹನಕ್ಕೆ ಸಿಲುಕಿ ಅಂಗವಿಕಲಗೊಂಡಿವೆ. ಅವುಗಳಿಗೆ ಆಹಾರ ನೀಡುತ್ತಿದ್ದ ಮರಗಳು ಕ್ಷೀಣಿಸಿವೆ. ಬದುಕುಳಿಯಲು ಅವು ಊರಿನಂಗಳದ ಕಸದ ತೊಟ್ಟಿಗಳಲ್ಲಿ ಆಹಾರ ಹುಡುಕುತ್ತಾ ಬದುಕು ನೂಕುತ್ತಿವೆ.

ನಾಲ್ಕು ಅಂಕಗಳ ಪ್ರಶ್ನೆಗಳು:- (ಐದಾರು ವಾಕ್ಯಗಳಲ್ಲಿ ಉತ್ತರಿಸಿ)

1. ವಾಲ್‌ಪರೈಗೆ ಬಂದ ಮಾರ್ಷ್‌ಅಲ್ಲಿ ಹೇಗೆ ನೆಲೆಯೂರಿದ? ವಿವರಿಸಿ.

1890 ರಲ್ಲಿಕಾರ್ವೆರ್ ಮಾರ್ಷ್ ಎಂಬ ಬ್ರಿಟಿಷಿಗ ಕುದುರೆಯೇರಿ, ಜೀರುಂಡೆಗಳ ಗದ್ದಲದಲ್ಲಿ ತನ್ಮಯವಾಗಿದ್ದ ಕಗ್ಗತ್ತಲು ಅರಣ್ಯವನ್ನು ಪ್ರವೆಶಿಸಿದನು. ಹೆಜ್ಜೆಹೆಜ್ಜೆಗೂ ಸರಪಳಿಯಂತೆ ಮರದಿಂದ ಮರಕ್ಕೆ ಬಿದ್ದಿದ್ದ ನೂರಾರು ಬಳ್ಳಿಗಳನ್ನು ಭೇದಿಸುವುದೇ ಸವಾಲಾಯಿತು. ಕಾಡಿನ ಒಳಗೆ ಪ್ರವೇಶಿಸಲು ಆಗದೆ, ಹಿಂದಿರುಗಲು ಹಾದಿಯೂ ಕಾಣದೆ ಅಲ್ಲೇ ರಾತ್ರಿಗಳನ್ನು ಕಳೆದನು. ಅಲ್ಲಿಂದ ಮುಂದೆ ಬಂದ ಅವನಿಗೆ ಜನರು ಓಡಾಡಿ ಸವೆದಂತಿದ್ದ ಕಿರುಹಾದಿಯೊಂದು ಗೋಚರಿಸಿತು. ಅದೇದಾರಿಯಲ್ಲಿ ಸಾಗಿದಾಗ ನಾಲ್ಕಾರು ಪುಟ್ಟ ಗುಡಿಸಲುಗಳಿದ್ದ ಹಾಡಿ (ಪ್ರದೇಶ) ಕಾಣಿಸಿತು. ಕುದುರೆಯನ್ನೇರಿ, ಟೋಪಿ, ನಾಜೂಕು ಪೋಷಾಕನ್ನು ಧರಿಸಿದ ವ್ಯಕ್ತಿಯನ್ನು ನೋಡಿ ಭಯಗೊಂಡ ಆದಿವಾಸಿಗಳು ತಮ್ಮ ಮಕ್ಕಳನ್ನು ಎಳೆದುಕೊಂಡು ಮಾಯವಾದರು. ಅಲ್ಲಿ ಮಾರ್ಷ್‌ಗೆ ಪೂಣಚ್ಚಿ ಎಂಬ ಆದಿವಾಸಿಯ ಪರಿಚಯವಾಯಿತು. ಆತನ ಸ್ನೇಹ ಸಂಪಾದಿಸಿ ಅಲ್ಲೇ ವಾಸಿಸತೊಡಗಿದನು.

2. ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?

ವಾಣಿಜ್ಯ ವ್ಯವಹಾರದ ದೃಷ್ಟಿಯಿಂದ ಶ್ರೀಮಂತ ಪ್ರದೇಶವೆಂದು ಗುರುತಿಸಿಕೊಂಡಿದ್ದ ವಾಲ್‌ಪರೈ ನಂತರದ ದಿನಗಳಲ್ಲಿ ತತ್ತರಿಸಿತು. ಅಂತಾರಾಷ್ಟ್ರೀಯ ವಿದ್ಯಮಾನಗಳು ವಾಲ್‌ಪರೈನ ಆರ್ಥಿಕ ಸ್ಥಿತಿಗತಿಗೆ ಕುತ್ತುತಂದವು. ವಿಶ್ವಮಾರುಕಟ್ಟೆಯಲ್ಲಿ ಚಹಾದ ಬೇಡಿಕೆ ಕುಸಿಯಿತು. ರಫ್ತು ಇಳಿಮುಖಗೊಂಡು ಚಹಾ ತೋಟಗಳು ನಷ್ಟವನ್ನನುಭವಿಸಿದವು. ಬದುಕುಳಿಯಲು ತೋಟದ ಮಾಲಿಕರು ಉತ್ಪಾದನಾ ವೆಚ್ಚ ಕಡಿತಗೊಳಿಸುವ ಅನಿವಾರ್ಯತೆಗೊಳಗಾದರು. ಜನರು ನಿರ್ವಹಿಸುತ್ತಿದ್ದ ಕೆಲಸಗಳಿಗೆ ಯಂತ್ರಗಳನ್ನು ಬಳಸಿದರು. ಕಂಗಾಲಾದ ಕಾರ್ಮಿಕರು ಕೆಂಪು ಬಾವುಟಗಳನ್ನು ಹಿಡಿದು ಹೋರಾಟಕ್ಕೆ ಸಿದ್ಧರಾಗಿ, ಸರಕಾರಕ್ಕೆ ಮನವಿ ಸಲ್ಲಿಸಿದರೂ ಯಾವುದೇ ಭರವಸೆಗಳು ದೊರೆಯಲಿಲ್ಲ. ಇವುಗಳು ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳಾಗಿವೆ.

3. ಸಿಂಹ ಬಾಲದ ಕೋತಿಗಳು ಮತ್ತು ಹಾಡು ಹಕ್ಕಿಗಳಿಗಾದ ಅನನುಕೂಲಗಳಾವುವು? ವಿವರಿಸಿ.

ಕಾಲಾಂತರದಿಂದ ವಾಲ್‌ಪರೈ ಕಾಡಿನಲ್ಲಿ ಆಧಿಪತ್ಯ ಸ್ಥಾಪಿಸಿಕೊಂಡು ಸ್ವಚ್ಛಂದವಾಗಿ ಬದುಕಿದ್ದ ಸಿಂಹಬಾಲದ ಕೋತಿಗಳ ನೆಲೆ ಧ್ವಂಸವಾಯಿತು. ವೃಕ್ಷವಾಸಿಗಳಾದ ಕೋತಿಗಳು ಮರದಿಂದ ಮರಕ್ಕೆ ಹಾರುವಂತಿಲ್ಲ. ಬದಲು ನೆಲಕ್ಕೆ ಇಳಿದು ಡಾಂಬರ್ ರಸ್ತೆ ದಾಟಿ ಮತ್ತೊಂದು ಮರ ಹತ್ತಬೇಕು. ರಸ್ತೆದಾಟುವ ನಾಗರಿಕ ಬುದ್ಧಿ ಇಲ್ಲದ ಕೋತಿಗಳು ವಾಹನಕ್ಕೆ ಸಿಲುಕಿ ಅಂಗವಿಕಲಗೊಂಡಿವೆ. ಅವುಗಳಿಗೆ ಆಹಾರ ನೀಡುತ್ತಿದ್ದ ಮರಗಳು ಕ್ಷೀಣಿಸಿವೆ. ಬದುಕುಳಿಯಲು ಅವು ಊರಿನಂಗಳದ ಕಸದ ತೊಟ್ಟಿಗಳಲ್ಲಿ ಆಹಾರ ಹುಡುಕುತ್ತಾ ಬದುಕು ನೂಕುತ್ತಿವೆ. ಹಾಡು ಹಕ್ಕಿಗಳಾದ ವಿಷಲಿಂಗ್ ಥ್ರಷ್‌ಗಳು ಬದುಕುಳಿಯುವ ಛಲ ತೊಟ್ಟಿವೆ. ಮಿನುಗುವ ಹಸಿರು ಪಾಚಿಗಳನ್ನು ಹೊದ್ದು ಮಲಗಿದ ಕಲ್ಲುಬಂಡೆಗಳ ನಡುವೆ, ನುಸುಳಿ ಹರಿಯುತ್ತಿದ್ದ ಸ್ವಚ್ಛ ನೀರಿನ ಹಳ್ಳಕೊಳ್ಳಗಳು ಆ ಹಕ್ಕಿಗಳಿಗೆ ಆಶ್ರಯವಾಗಿದ್ದವು. ಬದಲಾದ ಪರಿಸ್ಥಿತಿಯಲ್ಲಿ ಝರಿ ಜಲಪಾತಗಳ ಪಾತ್ರಗಳನ್ನೆಲ್ಲ ಆವರಿಸಿ ಮೆಲ್ಲನೆ ತೆವಳುತ್ತಿರುವ ಕೊಳಚೆ ನೀರಿನ ಚರಂಡಿಗಳೇ ಹಾಡುಹಕ್ಕಿಗಳ ನೆಲೆಯಾಗಿವೆ.

4. ಅಭಿವೃದ್ಧಿತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

ಮಾನವ ಕೇಂದ್ರೀಕೃತ ಅಭಿವೃದ್ಧಿ ಎನ್ನುವುದು ತನ್ನ ಹುಟ್ಟಿನಲ್ಲೇ ದುರಂತದ ಬೀಜಗಳನ್ನು ಅಡಗಿಸಿಕೊಂಡಿರುತ್ತದೆ. ಈ ಬೀಜಗಳು ಸದ್ದಿಲ್ಲದೆ ಅಡಗಿರುತ್ತವೆ. ಅಭಿವೃದ್ಧಿಯ ಪರಾಕಾಷ್ಠೆ ಮುಟ್ಟಿದೊಡನೆ ಅವು ಚಿಗುರೊಡೆದು ದುರಂತದ ವಿರಾಟ್ ಪ್ರದರ್ಶನಕ್ಕೆ ಸಜ್ಜಾಗುತ್ತದೆ. ಆದ್ದರಿಂದ ಮಾನವನು ಅಭಿವೃದ್ಧಿಗಾಗಿ ಕೈಗೊಳ್ಳುವ ಯೋಜನೆಗಳು ಯಾವಾಗಲೂ ಮುಂದಾಲೋಚನೆಯಿಂದ ಕೂಡಿರಬೇಕು. ವಾಲ್‌ಪರೈನ ದುರಂತ ಒಂದು ಉದಾಹರಣೆ ಮಾತ್ರ. ಕಾಡನ್ನು ನಾಶಪಡಿಸುವುದರಿಂದ ಪ್ರಾಣಿಸಂಕುಲ ನಾಶವಾಗುತ್ತದೆ. ಜಲ ಮೂಲಗಳ ನಾಶವಾಗುತ್ತವೆ. ಇದರಿಂದಾಗಿ ಹವಾಮಾನ ವೈಪರೀತ್ಯ ಮತ್ತು ಬರಗಾಲಗಳು ಉಂಟಾಗುತ್ತವೆ. ಮುಂದೆ ನಾನಾ ರೀತಿಯ ಖಾಯಿಲೆಗಳಿಗೆ ಮಾನವನು ತುತ್ತಾಗಬಹುದು. ಇದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾನವನು ಕೈಗೊಂಡರೆ ಈ ಭೂಮಿಯಲ್ಲಿ ಆತನಿಗೆ ವಾಸ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ಉಂಟಾಗಬಹುದು.

ಭಾಷಾಭ್ಯಾಸ:

ಅ. ಗುಣವಾಚಕಗಳನ್ನು ಗುರುತಿಸಿ.

1. ಕಿರುಹಾದಿ - ಕಿರು
2. ಹಸಿರುಕಂಬಳಿ - ಹಸಿರು
3. ಸಣ್ಣಕುರುಹು - ಸಣ್ಣ
4. ಹಾಡುಹಕ್ಕಿ - ಹಾಡು
5. ಶುದ್ಧನೀರು - ಶುದ್ಧ
6. ಸ್ವಚ್ಛಸಮುದ್ರ - ಸ್ವಚ್ಛ

ಆ. ಕ್ರಿಯಾಪದಗಳ ಕಾಲವನ್ನು ಗುರುತಿಸಿ.

1. ಆಗಮಿಸಿದ - ಭೂತಕಾಲ
2. ಅನ್ವೇಷಿಸುತ್ತಾ - ವರ್ತಮಾನ ಕಾಲ
3. ಹುಡುಕುವನು - ಭವಿಷ್ಯತ್ ಕಾಲ
4. ಹರಿಯುತ್ತಿದ್ದ - ವರ್ತಮಾನ ಕಾಲ

ಇ. ವಿಭಕ್ತಿ ಪ್ರತ್ಯಯಗಳನ್ನು ಹೆಸರಿಸಿ.

1. ಮಾರ್ಷ್‌ಗೆ - ಚತುರ್ಥೀ ವಿಭಕ್ತಿ
2. ಜಾಡನ್ನು - ದ್ವಿತೀಯಾ ವಿಭಕ್ತಿ
3. ಗುಡಿಸಲಿನಿಂದ- ತೃತೀಯಾ ವಿಭಕ್ತಿ
4. ಮುಖದಲ್ಲಿ - ಸಪ್ತಮೀ ವಿಭಕ್ತಿ
5. ಕೋತಿಗಳ - ಷಷ್ಠೀ ವಿಭಕ್ತಿ

ಈ. ದ್ವಿರುಕ್ತಿಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

1. ಹೆಜ್ಜೆ ಹೆಜ್ಜೆ-ಕಾಡುದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ಕಲ್ಲುಮುಳ್ಳುಗಳಿರುತ್ತವೆ.
2. ಸಹಸ್ರ ಸಹಸ್ರ-ಪ್ರಸಿದ್ಧವಾದ ಪುಣ್ಯಕ್ಷೇತ್ರಗಳಿಗೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಹೋಗುತ್ತಾರೆ.
3. ಮೆಲ್ಲ ಮೆಲ್ಲನೆ – ವಯಸ್ಸಾದವರು ಕೋಲನ್ನುಆಧಾರವಾಗಿ ಹಿಡಿದು ಮೆಲ್ಲಮೆಲ್ಲನೆ ನಡೆಯುತ್ತಾರೆ.

ಉ. ಸಂಖ್ಯಾ ವಾಚಕಗಳನ್ನು ಮತ್ತು ಸಂಖ್ಯೇಯಗಳನ್ನು ಪಟ್ಟಿಮಾಡಿ.

1. ಸಂಖ್ಯಾ ವಾಚಕಗಳು - ನೂರಾರು, ಒಬ್ಬನು, ನಾಲ್ಕಾರು, ಹತ್ತಾರು, ಸಹಸ್ರಾರು
2. ಸಂಖ್ಯೇಯಗಳು -ಒಂದನೆಯ, ಎರಡನೆಯ, ಮೂರನೆಯ, ನಾಲ್ಕನೆಯ

ಈ. ಕೆಳಗಿನ ಕ್ರಿಯಾಪದಗಳ ಧಾತುರೂಪ ಗುರುತಿಸಿ.

ಶೋಧಿಸು - ಶೋಧ

ಕಳೆದುಹೋಗು - ಕಳೆ

ಆಸ್ವಾದಿಸು - ಆಸ್ವಾದ

ಹಾಡುವುದು - ಹಾಡು

***************

DPUE